<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸದುರ್ಗ</u>

ಓ.ಎಸ್.**66/2021**
ಪಿ.ಡಬ್ಲೂ. **2**

ದಿನಾಂಕ.**19/08/2023.**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

<u>ಪಾಟೀ ಸವಾಲು: ಶ್ರೀ..ಎ .ಎಲ್.ಬಿ , ವಕೀಲರಿಂದ ಪ್ರತಿವಾದಿಗಳ ಪರವಾಗಿ:</u>

1. ನಾನು ಮತ್ತು ವಾದಿ ವಿಶ್ವಾಸದಿಂದ ಇದ್ದೇವೆಂದರೆ ಸರಿ . ನನಗೆ ತೊಂದರೆ ಇದ್ದಾಗ ವಾದಿ ಹಣ ಖಾಸಿನ ಸಹಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ನಾನು ವಾದಿ ಆಸ್ತಿ ವಿಭಾಕ್ಕಾಗಿ ಹಾಕಿರುತ್ತಾರೆಂದು ಬರೆಸಿರುತ್ತೇನೆ. 2 ಸೈಟು ಮತ್ತ 8 ಜಮೀನಿಗಾಗಿ ವಿಭಾಗಕ್ಕೆ ಹಾಕಿರುತ್ತಾರೆ. ದಾವಾ ಸ್ವತ್ತುಗಳ ವಿಸ್ತೀರ್ಣ, ಚೆಕ್ಕುಬಂದಿ ಮತ್ತು ಸರ್ವೇ ನಂಬರ್ ಗಳನ್ನು ಹೇಳಲು ಆಗುವುದಿಲ್ಲ.

2. ದಾವಾ ಸ್ವತ್ತುಗಳು ಈಗ 1 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇರುತ್ತದೆ. 2 ನೇ ದಾವಾ ಸ್ವತ್ತು 1 ನೇ ಪ್ರತಿವಾದಿಗೆ ದರ್ಖಾಸ್ತಿನಲ್ಲಿ ಮಂಜೂರಾಗಿದ್ದು ಅದು ಅವರ ಸ್ವಂತ ಆಸ್ತಿ ಎಂದರೆ ಸರಿ. ದಾವಾ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿಗಳು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.